# ಏನೆಲ್ಲಾ ಆಗಬಹುದು ?

- ಭರಪೂರ ಮನರಂಜನೆ ದೊರೆಯುತ್ತದೆ. ಆನ್‌ಲೈನ್ ಗೇಮಿಂಗ್ ಎನ್ನುವುದು ಬೇರೆಯದೇ ಮಜಲು ಕಾಣಬಹುದು, ಕಂಡರಿಯದ ಅನುಭವ ನೀಡಬಲ್ಲದು.
- ಜಗದ ಜನರನ್ನೆಲ್ಲಾ ಒಟ್ಟುಗೂಡಿಸುತ್ತದೆ. ಯಾವುದೋ ಮೂಲೆಯಲ್ಲಿರುವ ಮಿತ್ರನನ್ನು ಖುದ್ದು ಭೇಟಿಯಾದಷ್ಟೇ ನೈಜತೆಯಲ್ಲಿ ಮೆಟಾವರ್ಸಿನಲ್ಲಿ ಸಂಧಿಸಬಹುದು.
- ಮೆಟಾ ಟೂರಿಸಂ: ವಿಶ್ವದ ಯಾವುದೇ ಪ್ರವಾಸಿ ತಾಣವನ್ನಾದರೂ ಮನೆಯಲ್ಲೇ ಕುಳಿತು ಸುತ್ತಾಡಿ ಬರಬಹುದು, ಅಲ್ಲಿಗೇ ಹೋದ ಅನುಭವದೊಂದಿಗೆ.
- ಶೈಕ್ಷಣಿಕ ರಂಗದಲ್ಲಿ ಮಹತ್ತರ ಬದಲಾವಣೆಗಳಾಗುತ್ತವೆ. ಹಾರ್ವರ್ಡ್‌ನ ಕ್ಲಾಸ್ ರೂಮ್ ತರಗತಿಗಳನ್ನು ಎಲ್ಲಿಂದ ಬೇಕಾದರೂ ಹಾಜರಾಗಬಹುದು. ಲ್ಯಾಬೊರೇಟರಿ ಪ್ರಯೋಗಗಳನ್ನು, ಪಠ್ಯದ ಥಿಯರಿಗಳನ್ನು 3ಡಿ ರೂಪದಲ್ಲಿ ಕಲಿಯುಬಹುದು
- ಆಫೀಸಿನ ಮೀಟಿಂಗುಗಳು, ಸೆಮಿನಾರುಗಳೆಲ್ಲ ಹೊಸ ರೂಪ ಪಡೆಯುತ್ತವೆ. ನೌಕರರೆಲ್ಲ ಹಲವು ದಿಕ್ಕುಗಳಲ್ಲಿ ಹಂಚಿಹೋಗಿದ್ದರೂ, ಡಿಜಿಟಲ್ ಮೀಟಿಂಗ್ ಹಾಲಿನ ಒಂದೇ ಟೇಬಲ್ಲಿನ ಸುತ್ತ ಒಟ್ಟಿಗೇ ಕುಳಿತು ಚರ್ಚಿಸುವ ಕಾರ್ಯದಕ್ಷತೆ ದೊರಕಬಹುದು.
- ವೈದ್ಯಕೀಯ ಕ್ಷೇತ್ರದಲ್ಲಿ ಕ್ರಾಂತಿಯಾಗುತ್ತದೆ. ಎಲ್ಲೋ ಇರುವ ರೋಗಿಗೆ ಮತ್ತೆಲ್ಲೋ ಇರುವ ವೈದ್ಯ ಸರ್ಜರಿ ಮಾಡಬಹುದು. ಮನೋಸಂಬಂಧೀ ರೋಗಗಳಾದ ಆಂಗ್ಸೈಟಿ, ಫೋಬಿಯಾ ಇತ್ಯಾದಿಗಳಿಗೆ ಚಿಕಿತ್ಸೆ ಈ ಮುಖೇನ ದೊರೆಯುಬಹುದು. ಪೇನ್ ಥೆರಪಿ, ನೋವಿಲ್ಲದ ಶಸ್ತ್ರಚಿಕಿತ್ಸೆ ಇತ್ಯಾದಿ ಹೊಸ ಆವಿಷ್ಕಾರಗಳಿಗೆ ನಾಂದಿ ಹಾಡಬಹುದು.

ಕಂಡರಿಯದವರಿಗೆ ಒತ್ತೆಯಿಟ್ಟು ಕುಳಿತಿರುವಾಗ, (ಸ್ಮಾರ್ಟ್‌ಫೋನ್ ಅನ್–ಲಾಕ್ ಮಾಡಲು ನಾವು ಬೆರಳಗೆರೆಯ ಗುರುತು ನೀಡುವುದನ್ನು ನೆನಪಿಸಿಕೊಳ್ಳಿ) 'ಇನ್ನೇನು ಉಳಿದಿದೆ?' ಎಂದು ನಾವು ಕೇಳಬಹುದು. ಆದರೆ ವಿಷಯ ಅಷ್ಟು ಸರಳವಿಲ್ಲ. ಈ ಮೆಟಾವರ್ಸಿನ ಡಾಟಾ ಸಂಗ್ರಹ ಅದೆಷ್ಟು ನಿಖರ ಹಾಗೂ ವೈಯಕ್ತಿಕ ಎನ್ನುವುದನ್ನು ಈ ಮೊದಲೇ ನೋಡಿದ್ದೇವೆ. ಪ್ರತಿ ವ್ಯಕ್ತಿಗೂ ಒಂದು ಖಾಸಗಿತನವಿರುತ್ತದೆ. ಅವನದೇ ಆದ ಕೆಲವು ಗೋಪ್ಯ ಸಂಗತಿಗಳಿರುತ್ತವೆ. ಅತಿ ಹತ್ತಿರದವರಲ್ಲಿ ಮಾತ್ರ ಹಂಚಿಕೊಳ್ಳಬಹುದಾದ ಭಾವನೆಗಳು, ನಾಲ್ಕು ಗೋಡೆಗಳ ಮಧ್ಯೆ ಮಾತ್ರ ತೆರೆದುಕೊಳ್ಳಬಹುದಾದ ಕಾಮನೆಗಳು, ನಮಗೇ ಗೊತ್ತಿರದ ಅದೆಷ್ಟೊ ಮನೋವಾಂಛೆಗಳು ಯಾವುದೋ ಕಾರ್ಪೊರೇಟ್ ಕಂಪನಿಯ ಮಾಲೀಕನ ಸೊತ್ತಾಗುವುದು ಅದೆಷ್ಟು ಸಮಂಜಸ? ಆದರೆ ವಿಚಿತ್ರ ನೋಡಿ. ಗಂಡ ಹೆಂಡತಿಯ ನಡುವಿನ ಜಗಳ ಪಕ್ಕದ ಮನೆಗೆ ಗೊತ್ತಾಗಬಾರದು ಎಂದು ಬಯಸುವ ಜನ, ತಮ್ಮೆಲ್ಲಾ ಖಾಸಗಿ ಸಂಗತಿಗಳೂ ಮತ್ಯಾರದೋ ಸೊತ್ತಾಗುತ್ತಿರುವುದರ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳುವುದಿಲ್ಲ. 'ಪಕ್ಕದ ಮನೆಯವನಿಗೆ ಮಾತ್ರ ಗೊತ್ತಾಗಬಾರದು, ಯಾವುದೋ ಮೂಲೆಯಲ್ಲಿರುವ ಅಪರಿಚಿತನಿಗೆ ತಿಳಿದರೆ ಏನು ನಷ್ಟ?' ಎನ್ನುವ ಧೋರಣೆಯೂ ಇರಬಹುದಿಲ್ಲಿ. ಆದರೆ ಹೀಗೆ ಸಂಗ್ರಹವಾದ ದತ್ತಾಂಶ ಒಬ್ಬ ವ್ಯಾಪಾರಿಯ ಕೈಗೆ, ಅಪರಾಧಿ, ಆತಂಕವಾದಿ ಅಥವಾ ಸರ್ವಾಧಿಕಾರಿ... ಹೀಗೆ ಯಾರ ಕೈಗೆ ಸಿಕ್ಕರೂ ಅದು ಕೊನೆಯಲ್ಲಿ ಬಂದೆರಗುವುದು ಜನಸಾಮಾನ್ಯನ ಬುಡಕ್ಕೇ ಎಂಬ ಸತ್ಯವನ್ನು ನಾವು ಕಡೆಗಣಿಸಕೂಡದು.

'ಭವಿಷ್ಯದಲ್ಲಿ, ಸೂಪರ್ ಹ್ಯೂಮನ್ ಎಂದು ಕರೆಯಬಹುದಾದ ಕೃತಕ ಬುದ್ಧಿಮತ್ತೆ ಪ್ರೇರಿತ ಯಂತ್ರಗಳು ಭೂಮಿಯ ಮೇಲೆ ಮೇಲುಗೈ ಸಾಧಿಸುತ್ತವೆ. ಮನುಷ್ಯ ತನ್ನ ಅಸ್ತಿತ್ವಕ್ಕಾಗಿ ಅವುಗಳೊಡನೆ ಸೆಣೆಸುವುದು ಅನಿವಾರ್ಯವಾಗುತ್ತದೆ' ಎಂಬುದಾಗಿ ಇಸ್ರೇಲಿ ಲೇಖಕ ಯುವಲ್ ಹರಾರಿ ಹೇಳುತ್ತಾನೆ. ಅದನ್ನು ಸಾಬೀತುಪಡಿಸುವಲ್ಲಿ ಮೆಟಾವರ್ಸ್ ಒಂದು ಪ್ರಮುಖ ಹೆಜ್ಜೆಯಾಗಿದೆ. ನಾವು ಹೆಚ್ಚು ಹೆಚ್ಚು ಹೊತ್ತು ಮೆಟಾಲೋಕದಲ್ಲಿ ಕಳೆದಷ್ಟೂ, ಯಂತ್ರಗಳಿಗೆ ಹೆಚ್ಚೆಚ್ಚು ಅಧೀನರಾಗುತ್ತೇವೆ ಎಂದೇ ನನಗೆ ಅನ್ನಿಸುತ್ತದೆ.

ಇವೆಲ್ಲವನ್ನೂ ಮೀರಿದ ಕುತೂಹಲವೊಂದಿದೆ ನನಗೆ. ಅದು ಮೆಟಾವರ್ಸ್‌ನ ಮೂರನೇ ಹಂತದ ಸಾಧ್ಯತೆಯ ಕುರಿತಾದದ್ದು. ಇಲ್ಲಿ ಮನುಷ್ಯನ ಮೆದುಳು ಹಾಗೂ ದೇಹವನ್ನು ಪ್ರತ್ಯೇಕಿಸಿ ನೋಡಲಾಗುತ್ತದೆ. ಮೆದುಳನ್ನು ಕೃತಕವಾಗಿ ಸ್ಟಿಮುಲೇಟ್ ಮಾಡುವ ಮೂಲಕ ಆ ವ್ಯಕ್ತಿ ಬೇರ್ಯಾವುದೋ ಲೋಕದಲ್ಲಿ ಇರುವ ಭ್ರಮೆಯನ್ನು ಕಟ್ಟಿಕೊಡಬಹುದು ಹಾಗೂ ಆತನ ದೇಹವೂ ಬೇರಾವುದೋ ಅವತಾರದಲ್ಲಿ ಆ ಲೋಕದಲ್ಲಿ ಜೀವಿಸುತ್ತಿರುವಂತಹ ಮಿಥ್ಯಾವಾಸ್ತವವನ್ನು ಸೃಷ್ಟಿಸಿಕೊಡಬಹುದು. ಹೀಗಾದಾಗ ನಿಜವಾಗಿಯೂ ಆ ವ್ಯಕ್ತಿ ಜೀವಿಸುತ್ತಿರುವುದು ಆತನ ಭೌತಿಕ ದೇಹವಿರುವ ಭೂಲೋಕದಲ್ಲೋ ಅಥವಾ ಆತನ ಬುದ್ಧಿ ಕಾರ್ಯಪ್ರವೃತ್ತವಾಗಿರುವ ಆ ಇನ್ನೊಂದು (ಮೆಟಾವರ್ಸ್) ಲೋಕದಲ್ಲೋ ಎನ್ನುವ ಪ್ರಶ್ನೆ ಏಳುವುದು ಸಹಜ. ಆ ವಿಷಯ ಹಾಗಿರಲಿ. ದಿನದ ಹೆಚ್ಚು ಹೊತ್ತು ಮೆದುಳು ಮೆಟಾವರ್ಸಿನಲ್ಲೇ ಸಂಚರಿಸುತ್ತಿದ್ದರೆ, ಭೂಮಿಯ ಮೇಲಿನ ದೇಹ ಒಂದಲ್ಲಾ ಒಂದು ರೀತಿಯ ಅನಾರೋಗ್ಯಕ್ಕೆ ಒಳಗಾಗುವುದು ಖಚಿತ. ಹೀಗಾಗಿ ಈ ಮೆಟಾವರ್ಸ್ ಮನುಷ್ಯನಿಗೆ ಲಾಭಕ್ಕಿಂತ ಹೆಚ್ಚು ಹಾನಿಯನ್ನೇ ಮಾಡಿತು ಎಂಬುದು ಒಂದು ವಾದ.

ಭಾರತೀಯ ಅಧ್ಯಾತ್ಮ ಚಿಂತನೆಗಳು ಈ

